8.	ಕೆ.ಸಿ.ಟಿ. ಮಿಲ್	0.30	0.282	ನೆಲಹಾಸು ಕೆಲಸ ಮುಗಿದಿದೆ
9.	ಮಾರುತಿ ನಗರ ಹೆಗ್ಗೇರಿ	1.30	0.419	ಕೊಳವೆ ಬಾವಿ ಕೆಲಸ ಮುಗಿದಿದೆ
	ಒಟ್ಟು	5.975	3.989	

ಹುಬ್ಬಳ್ಳಿ ನಗರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು

1225 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಹುಬ್ಬಳ್ಳಿ ನಗರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು ಎಷ್ಟು;*

ಆ) *ಹುಬ್ಬಳ್ಳಿ -ಧಾರವಾಡ ಮಹಾನಗರಸಭೆಯ ನಿಯಂತ್ರಣದಲ್ಲಿರುವ ಒಟ್ಟು ರಸ್ತೆ ಎಷ್ಟು; ಅವುಗಳಲ್ಲಿ ಡಾಂಬರೀಕರಣ ಮಾಡಬೇಕಾಗಿರುವ ರಸ್ತೆ ಎಷ್ಟು?*

ಇ) *ಡಾಂಬರೀಕರಣ ಮಾಡಲು ಉದ್ದೇಶಿಸಿರುವ ರಸ್ತೆಗಳು ಎಷ್ಟು ಹಾಗೂ ಯಾವಾಗ ಮಾಡಿಸಲಾಗುವುದು?*

ಶ್ರೀ ವೈಜನಾಥ್ ಪಾಟೀಲ (ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) 15 (ಹದಿನೈದು) ರಸ್ತೆಗಳು

ಆ) 3515 ರಸ್ತೆಗಳು

ಇ) 114 ರಸ್ತೆಗಳನ್ನು ಡಾಂಬರೀಕರಣ ಮಾಡಲು ಉದ್ದೇಶಿಸಲಾಗಿದೆ. ಹಣಾವಕಾಶ ಪರಿಗಣಿಸಿ ಹಂತ ಹಂತವಾಗಿ ಪ್ರಸ್ತುತ ಸಾಲಿನ ಮಳೆಗಾಲದ ನಂತರ ಕೈಗೆತ್ತಿಕೊಳ್ಳಲಾಗುವುದು.

ವಿಜಾಪುರ ನಗರದಲ್ಲಿ ರಿಂಗ್ ರಸ್ತೆ

1864 - ಶ್ರೀ ಬಸನಗೌಡ ಆರ್. ಪಾಟೀಲ್ (ವಿಜಾಪುರ) : ಮಾನ್ಯ (ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ವಿಜಾಪುರ ನಗರದಲ್ಲಿ ರಿಂಗ್ ರಸ್ತೆ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?*

ಆ) *ಇದ್ದಲ್ಲಿ ಯಾವ ಪ್ರದೇಶಗಳಲ್ಲಿ ಹಾದು ಹೋಗುವುದು? (ಸಂಪೂರ್ಣ ಮಾಹಿತಿ ಒದಗಿಸುವುದು)?*

ಇ) *ಎಷ್ಟು ದಿವಸಗಳಲ್ಲಿ ಈ ಕೆಲಸ ಮಾಡಲಾಗುವುದು?*

ಶ್ರೀ ವೈಜನಾಥ್ ಪಾಟೀಲ (ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಹೌದು.

• ಆ) ಈ ರಸ್ತೆಯು ವಿಜಾಪುರ ಧಾರವಾಡ ರಸ್ತೆ ಮುಖಾಂತರ ಹಾದು ಹೊಸದಾಗಿ ಕಟ್ಟಿದ ಆಕಾಶವಾಣಿ ಕೇಂದ್ರ ಹಾಗೂ ರಾಷ್ಟ್ರೀಯ ಹೆದ್ದಾರಿ ನಂ. 13 (ಸೊಲ್ಲಾಪುರ) ರಲ್ಲಿ ಸೇರುತ್ತದೆ. ಸದರಿ ವ್ಯಾಪ್ತಿಯಲ್ಲಿ ಈ ಕೆಳಕಾಣಿಸಿದ ಸರ್ವೆ ನಂಬರ್‌ಗಳನ್ನು ಒಳಗೊಂಡಿರುತ್ತದೆ.

650, 645, 648, 585, 646,656,644, 643, 687, 686, 684, 683, 740, 741, 742, 743, 838, 923, 151, 150ಎ, 150ಬಿ, 897, 60, 61 ಮತ್ತು 62.